228 (565) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)

ಮಾನ್ಯ ತೋಟಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳಿಗೆ ವಿಮೆ ಯೋಜನೆ ಜಾರಿಗೊಳಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು,

ಆ) ಪ್ರಕೃತಿ ವಿಕೋಪ ರೋಗ ಮುಂತಾದ ಸಂದರ್ಭಗಳಲ್ಲಿ ಅಡಿಕೆ, ತೆಂಗು, ಬಾಳೆ ಮತ್ತು ರಬ್ಬರ್ ಮುಂತಾದ ಬೆಳೆಗಳು, ಪೂರ್ಣ ಪ್ರಮಾಣದಲ್ಲಿ ನಾಶವಾಗುವುದರಿಂದ ಸಂಕಷ್ಟಕ್ಕೊಳಗಾಗುವ ರೈತರ ನೆರವಿಗೆ ಸರ್ಕಾರ ಸ್ಪಂದಿಸಿ ಕೂಡಲೇ ಬೆಳೆವಿಮೆ ಯೋಜನೆಯನ್ನು ಜಾರಿಗೊಳಿಸಲು ಮುಂದಾಗುವುದೇ?

ಶ್ರೀ ಶಶಿಕಾಂತ ಅ ನಾಯಕ

ಅ) ವಾರ್ಷಿಕ ತೋಟಗಾರಿಕೆ ಬೆಳೆಗಳಾದ ಆಲೂಗಡ್ಡೆ, ಈರುಳ್ಳಿ ಮತ್ತು ಮೆಣಸಿನಕಾಯಿ ಬೆಳೆಗಳನ್ನು ಬೆಳೆ ವಿಮಾ ಯೋಜನೆಯ ವ್ಯಾಪ್ತಿಗೆ ತರಲಾಗಿದೆ

ಆ) ರಾಷ್ಟ್ರೀಯ ಕೃಷಿ ವಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಮಾರ್ಗಸೂಚಿಯ ಪ್ರಕಾರ ಬಹು ವಾರ್ಷಿಕ ತೋಟಗಾರಿಕೆ ಬೆಳೆಗಳಾದ ಅಡಿಕೆ, ತೆಂಗು, ಮತ್ತು ರಬ್ಬರ್ ಇವುಗಳನ್ನು ಯೋಜನೆಯಡಿ ಅಳವಡಿಸಲು ಅವಕಾಶವಿರುವುದಿಲ್ಲ

2007 ರ ಮುಂಗಾರು ಹಂಗಾಮಿನಲ್ಲಿ ಬಾಳೆ ಬೆಳೆಯನ್ನು ವಿಮಾ ಯೋಜನೆ ವ್ಯಾಪ್ತಿಗೆ ತರಲು ಕ್ರಮ ಜರುಗಿಸಿದ್ದು, ಈ ಬೆಳೆಗೆ ರೈತರು ಕಟ್ಟ ಬೇಕಾದ ವಿಮಾ ಕಂತಿನ ದರ ಹೆಚ್ಚಾಗಿದ್ದರಿಂದ ಈ ಬೆಳೆಯನ್ನು ವಿಮೆಯ ವ್ಯಾಪ್ತಿಗೆ ತರಲಾಗಲಿಲ್ಲ